M.V.C 683/2022 P.W.2

**ದಿನಾಂಕ 26.03.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.**

**ಮುಖ್ಯವಿಚಾರಣೆಃ ಅರ್ಜಿದಾರರ ಪರವಾಗಿ ಶ್ರೀ SPK ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸುತ್ತಿದ್ದು, ಅದರಲ್ಲಿರುವ ಮಾಹಿತಿಗಳು ಸತ್ಯವಾಗಿದ್ದು, ಅದಕ್ಕೆ ನಾನು ಸಹಿ ಮಾಡಿರುತ್ತೇನೆ.

ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ.

1. ಗಾಯದ ಪ್ರಮಾಣ ಪತ್ರ ನಿಪಿ–15 ಎಂದು,
2. 3 ಫೋಟೊ ಗಳನ್ನು ಕ್ರಮವಾಗಿ ನಿಪಿ–16 ರಿಂದ ನಿಪಿ–18 ಎಂದು,
3. ಸಿಡಿ ಯನ್ನು ನಿಪಿ–19 ಎಂದು ಗುರುತಿಸಲಾಯಿತು.

**ಪಾಟೀ ಸವಾಲು 3 ನೇ ಎದುರುದಾರರ ಪರವಾಗಿ ಶ್ರೀ RSN ವಕೀಲರಿಂದ**

4. ನನಗೆ ಅಪಘಾತದಲ್ಲಿ ಸಾಮಾನ್ಯ ಸ್ವರೂಪದ ಗಾಯಗಳಾದವು ಎಂದರೆ ಸರಿಯಲ್ಲ. ನನಗೆ ಸಾಮಾನ್ಯ ಸ್ವರೂಪದ ಗಾಯವಾಗಿದ್ದರೂ ಸಹ ಪರಿಹಾರದ ಸಲುವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಸಮಯಕ್ಕೆ ಕಾರನ್ನು ನಾನು ಚಾಲಯಿಸುತ್ತಿದ್ದೆನು. ಲಾರಿಯನ್ನು ನಾನು ಸುಮಾರು 7 – 8 ಕಿಮೀ ದೂರದಿಂದಲೇ ಹಿಂಬಾಲಿಸಿಕೊಂಡು ಬಂದಿದ್ದೆನು. ಅಪಘಾತದ ಆದ ಸ್ಥಳವು ರಾಷ್ಟ್ರೀಯ ಹೆದ್ದಾರಿ ಎಂದರೆ ಸರಿ. ಲಾರಿಯು ಲೋಡ್ ತುಂಬಿದ ಲಾರಿ ಆಗಿತ್ತು ಎಂದರೆ ಸರಿ. ಆದ ಕಾರಣದಿಂದ ಲಾರಿಯು ನಿಧಾನವಾಗಿ ರಸ್ತೆಯ ಎಡಭಾಗದಲ್ಲಿ ಹೋಗುತ್ತಿತ್ತು ಎಂದರೆ ಸರಿಯಲ್ಲ. ಲಾರಿಯನ್ನು ಚಾಲಕನು ಸುಮಾರು 70 – 80 ಕಿಮೀ ವೇಗದಲ್ಲಿ ಚಲಾಯಿಸುತ್ತಿದ್ದನು. ನನ್ನ ಕಾರನ್ನು ನಾನು ಸುಮಾರು 60 – 70 ಕಿಮೀ ವೇಗದಲ್ಲಿ ಚಲಾಯಿಸುತ್ತಿದ್ದೆನು.
5. ಲಾರಿಯನ್ನು ಚಾಲಕನು 60– 70 ಕಿಮೀ ವೇಗದಲ್ಲಿ ಚಲಾಯಿಸುತ್ತಿದ್ದನು ಮತ್ತು ನಾನು ನನ್ನ ಕಾರನ್ನು 70 – 80 ಕಿಮೀ ವೇಗದಲ್ಲಿ ಚಲಾಯಿಸುತ್ತಿದ್ದೆನು ಎಂದರೆ ಸರಿಯಲ್ಲ. ನನ್ನ ಕಾರನ್ನು ನಾನು ಲಾರಿಯಿಂದ ಸುಮಾರು 20 – 30 ಮೀ ಅಂತರದಲ್ಲಿ ಚಲಾಯಿಸುತ್ತಿದ್ದೆನು. ನಾನು ಲಾರಿಯಿಂದ ಸಾಕಷ್ಟು ಅಂತರವನ್ನು ಕಾಯ್ದುಕೊಳ್ಳದೆ ಅತಿ ಸಮೀಪದಲ್ಲಿ ಕಾರನ್ನು ಚಲಾಯಿಸಿದ ಕಾರಣ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಲಾರಿಯ ಹಿಂಬದಿಯ ಬಲಭಾಗಕ್ಕೆ ನನ್ನ ಕಾರನ್ನು ಡಿಕ್ಕಿಪಡಿಸಿದೆನು ಎಂದರೆ ಸರಿಯಲ್ಲ.

6. ನಾನು ಚಲಾಯಿಸುತ್ತಿದ್ದ ಕಾರಿನ ಪಕ್ಕದಲ್ಲಿ ಮತ್ತೊಂದು ಕಾರು ಹೋಗುವಷ್ಟು ಜಾಗ ಇತ್ತು. ನನ್ನ ಕಾರಿನ ಮುಂದೆ ಲಾರಿಯನ್ನು ಹೊರತುಪಡಿಸಿ ಬೇರೆ ಯಾವುದೇ ವಾಹನ ಹೋಗುತ್ತಿರಲಿಲ್ಲ. ನನ್ನ ಕಾರಿನ ಹಿಂಬದಿಯಿಂದ ಯಾವುದೇ ವಾಹನ ಬರುತ್ತಿರಲಿಲ್ಲ. ಅಪಘಾತವು ನನ್ನ ಅಜಾಗರೂಕತೆಯಿಂದ ಮತ್ತು ಅತಿವೇಗದಿಂದ ಉಂಟಾಗಿದೆ ಎಂದರೆ ಸರಿಯಲ್ಲ. ನಿಪಿ-16 ರಿಂದ 18 ಫೋಟೊ ಗಳನ್ನು ನಾನು ಸಿದ್ದಗಂಗಾ ಆಸ್ಪತ್ರೆ ಯಲ್ಲಿ ದಾಖಲಾಗಿದ್ದಾಗ ತೆಗೆಯಲಾಗಿದೆ.
7. ನನ್ನ ವಾರ್ಷಿಕ ಆದಾಯಕ್ಕೆ ಸಂಬಂಧಿಸಿದಂತೆ ನಾನು ಯಾವುದೇ ದಾಖಲೆಗನ್ನು ಹಾಜರುಪಡಿಸಿರುವುದಿಲ್ಲ. ನಾನು ವಾರ್ಷಿಕವಾಗಿ ರೂಃ 60 ಲಕ್ಷ ವ್ಯವಹಾರ ಮಾಡುತ್ತಿದ್ದೆನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಡ್ರಿಪ್ ಇರಿಗೇಶನ್ ಕೆಲಸ ಮಾಡುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಅಪಘಾತ ಬಾಬ್ತು ಆದ ಗಾಯಗಳು ಸಂಪೂರ್ಣವಾಗಿ ಗುಣವಾಗಿದ್ದು ಯಾವುದೇ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ಅಪಘಾತವು ಲಾರಿ ಚಾಲಕನ ನಿರ್ಲಕ್ಷತೆಯಿಂದ ಮತ್ತು ಅಜಾಗರೂಕತೆಯಿಂದ ಆಗಿಲ್ಲ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಲಾಗಿ ಸರಿ ಇದೆ ಎಂದು ಒಪ್ಪಿರುತ್ತಾರೆ.

**(ಪಲ್ಲವಿ ಬಿ.ಆರ್)**
**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಶಿವಮೊಗ್ಗ.**